**ದಿಃ 16-04-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ವಕೀಲರವರಿಂದ:**

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿ ನಿಶಾನೆಗೊಳಿಸಿಕೊಂಡಿರುತ್ತೇನೆ.

ನಿಪಿ-32 ರಿಂದ ನಿಪಿ-40 : ಶಾಲಾ ದಾಖಲಾತಿ ಪ್ರಮಾಣ ಪತ್ರಗಳು

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರ ಪರ ಮಾನ್ಯ ಎ ಜಿ ಪಿ ಅವರಿಂದಃ**

1) ನಿಪಿ-32 ರಿಂದ ನಿಪಿ-40 ಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 12 ನೇ ವಾದಿ ನನ್ನ ತಂದೆಯ ಮೊದಲನೇ ಹೆಂಡತಿಯಾದ್ದು ಅವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. 13 ನೇ ವಾದಿ 2 ನೇ ಹೆಂಡತಿಯಾಗಿದ್ದು ಅವರಿಗೆ ಒಬ್ಬ ಮಗಳು ಇರುತ್ತಾಳೆ. ನನ್ನ ತಂದೆ ಹಾಗೂ 12 ಮತ್ತು 13 ನೇ ವಾದಿಗಳ ನಡುವೆ ವಿವಾಹ ವಿಚ್ಛೇದನವಾಗಿರಲಿಲ್ಲ. ಆದ್ದರಿಂದ ನಾವು ನಮ್ಮ ತಂದೆಯ ನೇರ ವಾರಸುದಾರರಾಗುವುದಿಲ್ಲ ಕೇವಲ 12ನೇ ವಾದಿ ಮಾತ್ರ ನೇರ ವಾರಸುದಾರರಾಗುತಾತರೆ ಎಂದರೆ ಸರಿಯಲ್ಲ. ನಾವು ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.